## ಕುಂಬಾರನಿಗೆ ವರುಷ ಮಡಿಕೆಗೆ ನಿಮಿಷ

ಕನ್ನಡ ಕಲರ್ಸ್ ಹಾಗೂ ಝೀ ವಾಹಿನಿಯಲ್ಲಿ ಅನೇಕ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಬಹುತೇಕ ಎಲ್ಲ ಕತೆಗಳಲ್ಲೂ ಖಳನಾಯಕ–ಖಳನಾಯಕಿಯರು ಇರುತ್ತಾರೆ. ಅವರ ಕಾಟ ಸಹಿಸಲು ಅಸಾಧ್ಯ. ಈ ಕಿರಿಕಿರಿಯ ಧಾರಾವಾಹಿಗಳು 4–5 ವರ್ಷಗಳು ನಡೆದರೆ ಅಷ್ಟು ದಿನ ವೀಕ್ಷಕ ಸಹಿಸಬೇಕು. ಇನ್ನೇನು ಧಾರಾವಾಹಿಗಳು ಮುಗಿಯುವ ಹಂತಕ್ಕೆ ಬಂದಾಗ ಅವರಿಗೆ ಯಾವುದೇ ರೀತಿ ಶಿಕ್ಷೆ ಇರುವುದಿಲ್ಲ. ಕೇವಲ ಕ್ಷಮೆ ಇಲ್ಲವೆ ಇದ್ದಕ್ಕಿದ್ದಂತೆ ಮಾಯವಾಗುತ್ತಾರೆ. ಇದು ವೀಕ್ಷಕರಿಗೆ ಒಂದು ರೀತಿಯ ಇರುಸುಮುರುಸು ಅಂದರೆ ತಪ್ಪಲ್ಲ. ಅವರ ತಪ್ಪಿಗೆ ಸರಿಯಾದ ಶಿಕ್ಷೆ ನೀಡಿದರೆ ಅಷ್ಟು ವರ್ಷಗಳ ಕಾಲ ಅವರನ್ನು ಸಹನೆಯಿಂದ ನೋಡಿದವರಿಗೂ ಸಮಾಧಾನ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅರ್ಥ ಇರಲಿ

‘ಝೀ’ ಕನ್ನಡದ ‘ಯಾರೇ ನೀ ಮೋಹಿನಿ’, ‘ಗಟ್ಟಿ ಮೇಳ’ ಮತ್ತು ‘ಸುಬ್ಬಲಕ್ಷ್ಮಿ ಸಂಸಾರ’ ಇತ್ತೀಚೆಗೆ ದಿಕ್ಕು ದೆಸೆಯಿಲ್ಲದಂತೆ ಸಾಗುತ್ತಿವೆ. ಈ ಧಾರಾವಾಹಿಗಳು ವೀಕ್ಷಕರ ಸಹನೆ ಪರೀಕ್ಷಿಸುವಂತಿವೆ. ನಿರ್ದೇಶಕರು ವೀಕ್ಷಕರನ್ನು ಬೆಪ್ಪು ತಕ್ಕಡಿಗಳೆಂದು ಭಾವಿಸುವಂತಿದೆ. ವೀಕ್ಷಕರ ಸಹನೆಗೂ ಒಂದು ಮಿತಿ ಇರುತ್ತದೆ. ಈ ಧಾರಾವಾಹಿಗಳಲ್ಲಿ ಯಾವುದೇ ರೀತಿಯ ಮನರಂಜನೆ ಇಲ್ಲ. ವಾಹಿನಿಯವರು ಇಂತಹ ಧಾರಾವಾಹಿಗಳನ್ನು ಪ್ರಸಾರ ಮಾಡುವ ಮೊದಲು ವೀಕ್ಷಕರ ಮನೋಭಾವನೆಯನ್ನು ಗಮನದಲ್ಲಿಟ್ಟುಕೊಳ್ಳುವುದು ಒಳಿತು.

—ಎಸ್. ರವೀಂದ್ರನಾಥ ಬೆಂಗಳೂರು

## ‘ತಪ್ಪುಗಮಪ’

ಈ ಸರಿಗಮಪ ಕಾರ್ಯಕ್ರಮವು ಹಾಡಿನ ಸ್ಪರ್ಧೆಯ ಹೆಸರಿನಲ್ಲಿ ಮಕ್ಕಳನ್ನು ಕೋತಿಯಂತೆ ಆಡಿಸಿ ಮಜಾ ತೆಗೆದದ್ದು ಆಯಿತು. ಹಳ್ಳಿಯ ಅಮಾಯಕರ ಮುಗ್ಧತೆಯನ್ನೂ ಅವರು ಆಡಿಕೊಂಡಿದ್ದು ಆಯಿತು. ಈಗ ಪಾಪ ಅದಾವುದೋ ತಾತಪ್ಪನನ್ನು ಗೇಲಿಮಾಡುವ ಹೊಸ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಪ್ರತಿಸಲವೂ ಹಿಂದಿನ ಸಲಕ್ಕಿಂತಲೂ ಕೀಳು ಮಟ್ಟಕ್ಕೆ ಬೀಳುವ ಭಂಡತನವನ್ನು ಮೆಚ್ಚಬೇಕೋ ಗೊತ್ತಿಲ್ಲ. ಆದರೆ ಇವರಿಗೆ ನಾಚಿಕೆ ಹಾಗೂ ಸದಭಿರುಚಿ ಎಂಬವುಗಳ ಪರಿಚಯವಿಲ್ಲ ಅನ್ನುವುದು ಸತ್ಯ. ಅದನ್ನು ನೋಡಿದರೆ ‘ಸರಿಗಮಪ ಅಲ್ಲ ತಪ್ಪುಗಮಪ’ ಎಂದೇ ಅನ್ನಿಸುತ್ತದೆ.

—ವಿನಯ್ ಎಂ.ಎಸ್.

ವಾರದ ಪತ್ರ

## ಕನ್ನಡವಾಹಿನಿಯಲ್ಲಿ ‘ಹಿಂದಿ’ ಸುದ್ದಿ

‘ಇದು ಕನ್ನಡ ವಾಹಿನಿ’ ಎಂಬ ಶೀರ್ಷಿಕೆ ಹೊತ್ತು ಪ್ರಾರಂಭವಾಗುವ ಚಂದನ ವಾಹಿನಿಯ ವಾರ್ತಾ ಪ್ರಸಾರದಲ್ಲಿ ನರೇಂದ್ರ ಮೋದಿ, ಅಮಿತ್ ಶಾ ಎಲ್ಲೋ ರಾಂಚಿಯಲ್ಲೋ, ಕಂಚಿಯಲ್ಲೋ ಯಾವುದೋ ಕಾಮಗಾರಿ ಉದ್ಘಾಟನೆ ಸಂದರ್ಭದಲ್ಲಿ ಮಾಡಿದ ದೀರ್ಘ ಹಿಂದಿ ಭಾಷಣವನ್ನು ಯಥಾವತ್ 3–4 ನಿಮಿಷಗಳಷ್ಟು ಕಾಲ ಪ್ರಸಾರ ಮಾಡುತ್ತದೆ.

ಚಂದನ ವಾಹಿನಿಯ ಅನೇಕ ವೀಕ್ಷಕರಿಗೆ ಹಿಂದಿ ಭಾಷೆ ಅರ್ಥವಾಗುವುದಿಲ್ಲ. ಅವರು ಹೇಳಿದ್ದನ್ನು ಸಂಕ್ಷಿಪ್ತವಾಗಿ ಕನ್ನಡದಲ್ಲಿ ಹೇಳಿ ಮಿಕ್ಕ ಪ್ರಶಸ್ತ ಸಮಯವನ್ನು ಮಹತ್ವದ ಪ್ರಾದೇಶಿಕ ಸುದ್ದಿಗಳಿಗೆ ಮೀಸಲಿಡುವುದು ಸೂಕ್ತ.

—ಶ್ರೀಧರ್ ಬೆಂಗಳೂರು

## ಮನೋಜ್ಞ ಕಥೆ

ಝೀ ಕನ್ನಡದ ‘ಜೊತೆ ಜೊತೆಯಲಿ’ ದಿನೇ ದಿನೇ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಕಲಾವಿದರೆಲ್ಲ ತಮ್ಮ ಪರಿಪಕ್ವತೆಯನ್ನು ಪ್ರದರ್ಶಿಸುತ್ತಿದ್ದಾರೆ. ಆರ್ಯವರ್ಧನ್ ನಡೆ ನುಡಿ ನಟ ವಿಷ್ಣುವರ್ಧನ್ ಅವರನ್ನು ಸ್ಮರಣೆಗೆ ತರುತ್ತದೆ. ಸುಬ್ರಹ್ಮಣ್ಯ ಸಿರಿಮನೆ, ಪುಷ್ಪಾ ಅವರ ಅಭಿನಯವಂತೂ ತುಂಬ ನೈಜವಾಗಿದೆ.

ಕಸದ ವಿಲೇವಾರಿ ಮಾಡುವುದು ಕೇವಲ ಸ್ಥಳೀಯ ಸಂಸ್ಥೆಯ ಜವಾಬ್ದಾರಿಯಲ್ಲ. ಅಲ್ಲಿ ನಾಗರಿಕರೂ ತಮ್ಮ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಲು ಶ್ರಮಿಸಬೇಕು ಎಂಬ ಭಾವದ ಕಥೆಯಂತೂ ಮನೋಜ್ಞವಾಗಿತ್ತು.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಭರವಸೆಯ ಶೋ

ಕಲರ್ಸ್ ಕನ್ನಡ ‘ಹಾಡು ಕರ್ನಾಟಕ’ ಎಂಬ ರಿಯಾಲಿಟಿ ಶೋ ಪ್ರಸಾರ ಮಾಡಲಿದೆ. ರಾಜ್ಯದ ಮೂಲೆ ಮೂಲೆಯಿಂದ ಸ್ಪರ್ಧಿಗಳು ಬಂದಿದ್ದಾರೆ. ಇಲ್ಲಿ ಐದು ಮಂದಿ ತೀರ್ಪುಗಾರರು ಇರುವುದೂ ಒಂದು ವಿಶೇಷ.

ತೀರ್ಪುಗಾರರಲ್ಲಿ ಮೂವರು ಪುರುಷರಿದ್ದರೆ, ಇಬ್ಬರು ಮಹಿಳೆಯರು. ಸ್ಪರ್ಧಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಗೋಚರಿಸುತ್ತಿದೆ. ಇದು ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತೇನೆ.

—ಮುರಲೀಧರ ಕುಲಕರ್ಣಿ, ಬೀದರ್

## ಕಥೆ ಬೆಳೆದರೆ ಪ್ರಯೋಜನವೇನು?

‘ಮಗಳು ಜಾನಕಿ’ ಬಹಳ ಚೆನ್ನಾಗಿ ಮೂಡಿಬರುತ್ತಿತ್ತು. ಆದರೆ ಇತ್ತೀಚೆಗೆ ವಿಪರೀತ ಪಾತ್ರಗಳನ್ನು ಅಳವಡಿಸಿಕೊಂಡು ಕಥೆ ನಿರ್ದಿಷ್ಟ ದಿಕ್ಕಿಲ್ಲದಂತೆ ಸಂಚರಿಸುತ್ತಿದೆ ಎನ್ನಿಸಿದೆ. ರಶ್ಮಿಯವರು ತಮ್ಮ ಪತಿ ಚಂದೂ ಭಾರ್ಗಿಯವರ ತಪ್ಪುಗಳ ಪಟ್ಟಿಯನ್ನು ಒಪ್ಪಿಸಿದ್ದೂ ಅದ್ಭುತವಾಗಿತ್ತು. ಅದರ ಮೇಲೆ ಕಥೆಯನ್ನು ಮುಂದುವರೆಸಿದ್ದರೆ ಚೆನ್ನಾಗಿರುತ್ತಿತ್ತು. ನೋಡಿದರೆ ಶ್ಯಾಮಲತ್ತೆ ಮಗನ ಆಗಮನ. ದೇವಕಿ– ಜಾನಕಿಗೆ ಭಾರ್ಗಿ ಫೋನ್ ಮಾಡಿದ್ದು ತೋರಿಸಲಾಯಿತು. ಬಹುಶಃ ವರ್ಷ ಪೂರ್ತಿ ಮುಂದುವರೆಸುವ ಉದ್ದೇಶದಿಂದ ಕಥೆಯನ್ನು ಬೆಳೆಸುತ್ತಿದ್ದಾರೆ ಎಂದೆನಿಸುತ್ತದೆ.

—ಸೀತಾ ಕೇಶವ, ಸಿಡ್ನಿ

ಸಮಸ್ಯೆಯ ಸುಳಿಯಲ್ಲಿ ಜಾನಕಿ: ಪ್ರಪಂಚದಲ್ಲಿ ಯಾರೂ ಸಿಲುಕದ ಸಮಸ್ಯೆಗಳ ಸುಳಿಯಲ್ಲಿ ಜಾನಕಿಯನ್ನು ಹಾಗೂ ಅವರ ಮನೆಯವರನ್ನು ಸಿಲುಕಿಸುವ ಮೂಲಕ ಸೀತಾರಾಂ ವೀಕ್ಷಕರ ಸಹನೆಯನ್ನು ಒರೆಗೆ ಹಚ್ಚುತ್ತಾರೆ.

ಜಾನಕಿಯ ಗಂಡ ನಿರಂಜನ ಕೆಲಸಕ್ಕೆ ಹೋದದ್ದನ್ನು ನಾನು ನೋಡೇ ಇಲ್ಲ. ಇನ್ನು ಬೇಕೋ ಬೇಡವೋ ಎಂದು ಬಂದು ಹೋಗುವ ನಿರಂಜನನ ತಮ್ಮ, ನಾಪತ್ತೆಯಾದ ಸಂಜನಾ ಪಾತ್ರ... ಹೀಗೇ ಸಾಗುತ್ತದೆ ಧಾರಾವಾಹಿ. ಅದರ ಸಂದೇಶವೇನು ಎನ್ನುವುದನ್ನಾದರೂ ನೋಡಬಹುದೆಂದರೆ ಧಾರಾವಾಹಿ ಮುಗಿಯುವ ಯಾವ ಲಕ್ಷಣಗಳೂ ಕಾಣುತ್ತಿಲ್ಲವಲ್ಲ.

—ಕೊ.ಸು. ನರಸಿಂಹ ಮೂರ್ತಿ ಚಾಮರಾಜಪುರಂ

ಸಂಸಾರವೆಂದು?: ಜಾನಕಿ ತನ್ನ ಗಂಡನ ಮನೆಯಲ್ಲಿದ್ದರೂ ಗಂಡನ ಜೊತೆ ಸಂಸಾರ ಮಾಡಲ್ಲ. ಮುದುಕರಾದ ಮೇಲೆ ಸಂಸಾರ ಮಾಡಲು ಸಾಧ್ಯವೇ?

—ಬಿ.ಎಸ್. ಮುಳ್ಳೂರ ಹಲಗತ್ತಿ

ಉಪಕಥೆಗಳು ಬೇಡ: ‘ಜಾನಕಿ’ ಸಿನಿಮೀಯ ತಿರುವು ಪಡೆದು ಎತ್ತಲೋ ಸಾಗುತ್ತಿದೆ. ಭಾರ್ಗಿ, ಶಾರ್ದೂಲರ ಕುತಂತ್ರ ಮಿತಿ ಮೀರಿದೆ. ಶಾರ್ದೂಲರು ತಮ್ಮ ಇಲಾಖೆಯ ಅಧಿಕಾರಿಗಳ ಬದಲಾಗಿ ಭಾರ್ಗಿಗೇ ರಿಪೋರ್ಟ್ ಮಾಡುತ್ತಾ ದಕ್ಷ ಅಧಿಕಾರಿ ಜಾನಕಿಯನ್ನು ಮಟ್ಟ ಹಾಕಲು ಹವಣಿಸುತ್ತಿದ್ದಾರೆ. ಇದೆಲ್ಲ ಬೇಗ ಮುಗಿಸಿದರೆ ಒಳ್ಳೆಯದು. ನಿಂತು ಹೋಗಿರುವ ಕೋರ್ಟ್ ಕೇಸುಗಳನ್ನು ಪರದೆ ಮೇಲೆ ತೋರಿಸಿದರೆ ವೀಕ್ಷಣೆಗೂ ಕುತೂಹಲ ಬಂದೀತು. ಅನಗತ್ಯ ಉಪಕಥೆಗಳನ್ನು ತುರುಕುವುದು ಸಾಕು.

—ಅರುಣ್ ಕೆ.ಎನ್., ಬೆಂಗಳೂರು

## ನಾಗದೋಷಕ್ಕೆ ಮುಕ್ತಿ ಎಂದು

ಝೀ ಕನ್ನಡದ ‘ನಾಗಿಣಿ’ ನೋಡಲು ರಂಜನೀಯ ಅನ್ನಿಸಿದರೂ ಮಾಯ, ಮಾಟ, ಮಂತ್ರಗಳು ಕಥೆಯನ್ನು ಗೊಂದಲಗೊಳಿಸುತ್ತಿದೆ. ನಾಗಮಣಿಗಾಗಿ ನಾಗಗಳ ಕಾದಾಟ ಮಂತ್ರವಾದಿಯ ಸೆಣಸಾಟದಿಂದ ವೀಕ್ಷಕರಿಗೆ ಮುಕ್ತಿ ಯಾವಾಗ?

—ಅಮರಯ್ಯಾ ಪತ್ರಿಮಠ ಶೋರಾಪುರ